ಉದ್ಯಮಿ. ಅನೇಕ ಉದ್ಯಮಗಳ ಜೊತೆಗೆ ಹತ್ತನ್ನೆರಡು ವರ್ಷಗಳಿಂದೀಚೆಗೆ ರಿಯಲ್ ಎಸ್ಟೇಟ್ ಉದ್ಯಮದಲ್ಲೂ ದೊಡ್ಡ ಹೆಸರು ಮಾಡಿದ್ದ. ಋಗ್ವೇದಿಯವರನ್ನೂ ಅನೇಕ ಸಾರಿ ಭೇಟಿಯಾಗಿ ತಾನು ಅಭಿವೃದ್ಧಿಪಡಿಸಿದ್ದ ವಿಲ್ಲಾಗಳ ಬಗ್ಗೆ ವಿವರಿಸಿದ್ದ. ಜೊತೆಗೆ ಲೆಕ್ಕವಿಲ್ಲದಷ್ಟು ಅಪಾರ್ಟ್‌ಮೆಂಟ್‌ಗಳನ್ನು ಕಟ್ಟಿಸುತ್ತಿದ್ದ. ಅನೇಕ ರಾಜಕಾರಣಿಗಳ ಜೊತೆ ಪಾರ್ಟ್‌ನರ್ ಆಗಿದ್ದ. ಅವನ ಯಶಸ್ಸಿನ ಬಗ್ಗೆ, ಅವನ ವ್ಯಾಪಾರ ವಹಿವಾಟುಗಳ ಬಗ್ಗೆ ತಿಂಗಳಿಗೊಮ್ಮೆಯಾದರೂ ವಿವಿಧ ಪತ್ರಿಕೆಗಳಲ್ಲಿ ಸುದ್ದಿಗಳು ಬರುತ್ತಲೇ ಇದ್ದವು. ರಾಜಕಾರಣಿಗಳ ಅಪಾರ ಮೊತ್ತದ ಕಪ್ಪು ಹಣ ಅವನ ಬಳಿಯಿದೆಯೆಂದು ಮಾತನಾಡಿಕೊಳ್ಳುತ್ತಿದ್ದರು. ಯಾವುದೇ ಇಲಾಖೆಯ ಎಂಥ ಅಧಿಕಾರಿಯನ್ನಾದರೂ ವೆಂಕಟೇಶ್ ಯಾದವ್ ಸರಿಗಟ್ಟಿಬಿಡುತ್ತಿದ್ದ. ಚಿಕ್ಕ ಹಳ್ಳಿಯೊಂದರಿಂದ ಬಂದ ಯಾದವ್ ಈ ಮಟ್ಟದಲ್ಲಿ ಬೆಳೆದದ್ದು ಕಂಡು ಋಗ್ವೇದಿಯವರಿಗೆ ಆಶ್ಚರ್ಯವಾಗಿತ್ತು. ಪರಿಚಯವಿರುವ ಅನೇಕ ಜನರಿಗೆ ಕಡಿಮೆ ಬೆಲೆಗೆ ಸೈಟು, ಫ್ಲ್ಯಾಟುಗಳನ್ನು ಋಗ್ವೇದಿ ವೆಂಕಟೇಶ್ ಯಾದವ್‌ನಿಂದ ಕೊಡಿಸಿದ್ದರು. ''ನೀವೊಂದು ವಿಲ್ಲಾ ತಗೊಬಿಡಿ ಸಾರ್, ದುಡ್ಡೇನೂ ಬೇಡ, ಗುರು ಕಾಣಿಕೆ ಅಂತ ತಿಳ್ಕೊಳಿ.'' ಎಂದು ಅನೇಕ ಬಾರಿ ವೆಂಕಟೇಶ್ ಯಾದವ್ ಒತ್ತಾಯಿಸಿದ್ದರೂ ಋಗ್ವೇದಿ, ''ನನಗೇತಕ್ಕಯ್ಯಾ, ಈ ಅರಮನೇನ ಮೈಂಟೇನ್ ಮಾಡೋದೇ ಕಷ್ಟ ಆಗಿದೆ. ಇನ್ನು ನನ್ಮಕ್ಳು ಪರದೇಶದಲ್ಲೆ ಪರ್ಮನೆಂಟಾಗಿಬಿಡ್ತಾರೆ.'' ಎಂದು ನಿರಾಕರಿಸಿದ್ದರು. ಇಷ್ಟಕ್ಕೂ ವೆಂಕಟೇಶ್ ಯಾದವ್ ಋಗ್ವೇದಿಯವರಿಗೆ ಇಷ್ಟೊಂದು ನಿಷ್ಠೆಯಿಂದಿರಲು ಕಾರಣ ಯೂನಿವರ್ಸಿಟಿಯಲ್ಲಿ ನಡೆದ ಒಂದು ಘಟನೆ. ವೆಂಕಟೇಶ್ ಯಾದವ್ ಯೂನಿವರ್ಸಿಟಿಯಲ್ಲಿ ಸ್ಟೂಡೆಂಟ್ ಲೀಡರ್ ಆಗಿದ್ದನಲ್ಲದೆ ರಾಜ್ಯಮಟ್ಟದ ಸಂಘಟನೆಯೊಂದರ ಸಂಚಾಲಕ ಕೂಡಾ ಆಗಿದ್ದ. ಒಮ್ಮೆ ಅವನ ವಿರೋಧಿಗಳು ಕ್ಯಾಂಪಸ್‌ನಲ್ಲಿ ಆಯುಧಗಳೊಂದಿಗೆ ಅಟ್ಯಾಕ್ ಮಾಡಿದಾಗ ವೆಂಕಟೇಶ್ ಯಾದವನನ್ನು ಋಗ್ವೇದಿ ರಕ್ಷಿಸಿದ್ದರಲ್ಲದೆ ಪೊಲೀಸ್ ಕಂಪ್ಲೇಂಟ್ ಲಾಡ್ಜ್ ಮಾಡಿ ವಿರೋಧಿಗಳೊಂದಿಗೆ ಸಂಧಾನ ಕೂಡ ಮಾಡಿಸಿದ್ದರು. ಸ್ವಲ್ಪ ಯಾಮಾರಿದ್ದರೂ ಅಂದು ವೆಂಕಟೇಶ್ ಯಾದವ್ ಪ್ರಾಣವನ್ನು ಕಳೆದುಕೊಳ್ಳುತ್ತಿದ್ದ.

ಹೆಗಲ ಮೇಲೆ ಯಾರೋ ಕೈ ಇಟ್ಟಂತಾಗಿ ಋಗ್ವೇದಿಯವರು ತಲೆ ಎತ್ತಿದಾಗ ಡಾಕ್ಟರ್ ನಾಗರಾಜ ಮೂರ್ತಿ ನಿಂತಿದ್ದರು. "ಬಾರಯ್ಯ ಪ್ರೊಫೆಸರ್, ಎಷ್ಟೊತ್ತಾಯ್ತು ಬಂದು ಏನ್ ಸಮಾಚಾರ?'' ಎಂದು ಪ್ರಶ್ನೆಗಳನ್ನು ಕೇಳುತ್ತಾ ಟ್ರೀಟ್‌ಮೆಂಟ್ ರೂಮಿಗೆ ಕರೆದುಕೊಂಡು ಹೋಗಿದ್ದರು. ''ತುಂಬಾ ಬಿಜಿಯಾಗಿದ್ದೀಯ.'' ಎಂದ ಋಗ್ವೇದಿಯ ಮಾತಿಗೆ, "ಇವೊತ್ತು ಸೋಮವಾರ ನೋಡು, ಮಾಮೂಲಿ ನಾಲ್ಕು ಪೇಷೆಂಟ್ಸ್ ಅಪಾಯಿಂಟ್‌ಮೆಂಟ್ ಇದೆ. ಹನ್ನೆರಡು ಗಂಟೆಯವರೆಗೂ ಬಿಡುವು. ಕುಡಿಲಿಕ್ಕೆ ಏನಾದ್ರೂ ತರಿಸಲಾ. ಮುಖದಲ್ಲಿ ಏನೋ ಗಾಬರಿ ತುಂಬಿಕೊಂಡಂತಿದೆ, ರಾತ್ರಿ ನಿದ್ದೆ ಸರಿಯಾಗಿ ಮಾಡಿದಂತೆ ಕಾಣಲ್ಲ.'' ಒಂದೇ ಸಮನಾಗಿ ವಿಚಾರಿಸಿಕೊಂಡಿದ್ದರು. ''ಸದ್ಯಕ್ಕೆ ಏನೂ ಬೇಡ, ನಿಮ್ಮ ರಿಸೆಪ್ಷನಿಸ್ಟ್ ಒಳ್ಳೆ ಬ್ಲಾಕ್ ಟೀ ಕೊಟ್ಟರು. ಮನುಷ್ಯನ ಶರೀರದಲ್ಲಿರುವ ಮನಸ್ಸು ಘನ ರೂಪದಲ್ಲೂ ಇರಲ್ವಂತೆ, ದ್ರವ ರೂಪದಲ್ಲೂ ಇರಲ್ವಂತೆ, ಅನಿಲ ರೂಪದಲ್ಲೂ ಇರಲ್ವಂತೆ. ಅದಿನ್ನೆಂಥ ರೂಪದಲ್ಲಿರ್ತದೆ? ಅದು ಮೆದುಳಿನಲ್ಲಿ ಮಾತ್ರ ಬೇರು ಬಿಟ್ಟುಕೊಂಡಿರ್ತದೋ ಇಲ್ಲ ದೇಹದ ಎಲ್ಲಾ ಪಾರ್ಟುಗಳಲ್ಲೂ ಚಲಿಸ್ತಿರ್ತದೋ?'' ಋಗ್ವೇದಿಯರ ಮಾತುಗಳಲ್ಲಿ ಎಂಥದ್ದೋ ಕಾತುರತೆ ತುಂಬಿತ್ತು. ನಾಗರಾಜ ಮೂರ್ತಿ, ''ನಿನ್ನ ಇಬ್ಬರ ಮಕ್ಕಳಲ್ಲಿ ಯಾರನ್ನಾದರೊಬ್ಬರನ್ನು ಇಂಡಿಯಾಕ್ಕೆ ಕರೆಸ್ಕೊ, ನಿನಗೆ ಇಂಥ ಡೌಟ್ಸ್ ಬರೋದೇ ಇಲ್ಲ. ಅಮೆರಿಕದಲ್ಲೇನಾದರೂ ಮುತ್ತು ರತ್ನ ತಿಂತಾರ?'' ಎಂದ ಮಾತುಗಳಲ್ಲಿ ಗಂಭೀರತೆ ತುಂಬಿಕೊಂಡಿತ್ತು. ''ಮೂರ್ತಿ, ನನ್ನ ಮಾತುಗಳಿಗೂ, ನಿನ್ನ ಮಾತುಗಳಿಗೂ ಒಂದಕ್ಕೊಂದು ಸಂಬಂಧ ಇದೆ ಅನ್ನಿಸ್ತಾ ಇದೆಯಾ ನಿನಗೆ. ಆರ್ ಯು ನಾಟ್ ಫೂಲಿಂಗ್ ಮಿ?'' ಎಂದ ಋಗ್ವೇದಿಯವರ ಮಾತುಗಳಲ್ಲೂ ಗಂಭೀರತೆ ಮನೆಮಾಡಿತ್ತು.